**ಓ ಎಸ್ ನಂಃ 418-14**
**ಪಿ ಡಬ್ಲ್ಯೂ ಃ 4**

**ದಿಃ 05-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್ ಎಸ್ ಆರ್ ವಕೀಲರಿಂದ**

8. ನಮ್ಮ ಕುಟುಂಬಕ್ಕೂ ಹಾಗೂ ಗೋವರ್ಧನ್ ಶೆಟ್ಟಿರವರ ಕುಟುಂಬಕ್ಕೂ ನನ್ನ ಪ್ರಕಾರ ನಿಕಟವಾದ ಸಂಪರ್ಕ ಇದೆ ಎಂದರೆ ನಿಜ. ಗೋವರ್ಧನ್ ಶೆಟ್ಟಿರವರಿಗೆ ಒಟ್ಟು 8 ಜನ ಮಕ್ಕಳಿದ್ದು ಅದರಲ್ಲಿ ಕೇಶವಮೂರ್ತಿ ಹಾಗೂ ಮಂಜುನಾಥ್ ರವರು ತೀರಿಕೊಂಡಿರುತ್ತಾರೆ. ಮಂಜುನಾಥ್ ರವರು 4-5 ವರ್ಷಗಳ ಹಿಂದೆ ತೀರಿಕೊಂಡಿದ್ದು ಕೇಶವಮೂರ್ತಿರವರು ಸಹ ಆಗಲೇ 1 ವರ್ಷ ಹಿಂದೆ ಮುಂದೆ ತೀರಿಕೊಂಡಿರುತ್ತಾರೆ. ಕೇಶವಮೂರ್ತಿರವರಿಗೆ ಮಕ್ಕಳು ಇರುವುದಿಲ್ಲ. ಕೇಶವಮೂರ್ತಿರವರ ಹೆಂಡತಿಯ ಹೆಸರು ಆರತಿ ಆಗಿರುತ್ತದೆ. ಕೇಶವಮೂರ್ತಿ ಹಾಗೂ ಆರತಿಯವರಿಗೆ ಸಂಜಯ್ ಎಂಬ ಮಗ ಇರುತ್ತಾರೆ ಎಂದರೆ ಸಂಜಯ್ ರವರನ್ನು ಅವರು ಸಾಕಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಮೃತ ಕೇಶವಮೂರ್ತಿರವರ ಅಕ್ಕ ಮಂಜುಳರವರನ್ನು ಮದುವೆಯಾಗಿರುತ್ತೇನೆ ಎಂದರೆ ನಿಜ. ಮಂಜುನಾಥ್ ಹಾಗೂ ಕೇಶವಮೂರ್ತಿಯವರು ಜೀವಂತವಿದ್ದಾಗ ಅವರ ಜೊತೆ ನನ್ನ ಸಂಬಂದ ಚೆನ್ನಾಗಿತ್ತು ಈಗಲೂ ಸಹ ಅವರ ಕುಟುಂಬದ ಜೊತೆ ಸಂಬಂದ ಚೆನ್ನಾಗಿರುತ್ತದೆ.

9. ನನ್ನ ಸೋದರ ಮಾವ ಶ್ರೀಧರ್ ಮೂರ್ತಿರವರು 2000 ಇಸವಿಯಮೊದಲು ತೀರಿಕೊಂಡಿರುತ್ತಾರೆ. ಶ್ರೀಧರ್ ಮೂರ್ತಿಯವರು ಯಾವ ವರ್ಷ ತೀರಿಕೊಂಡಿರುತ್ತಾರೆ ಸರಿಯಾಗಿ ಹೇಳಲು ಬರುವುದಿಲ್ಲ. ಶ್ರೀಧರ್ ಮೂರ್ತಿಯವರ ಹೆಂಡತಿಯ ಹೆಸರು ವೆಂಕಟಲಕ್ಷ್ಮಮ್ಮ ಇದ್ದು ಅವರು ಶ್ರೀಧರ್ ಮೂರ್ತಿರವರ ಮೊದಲೇ ತೀರಿಕೊಂಡಿರುತ್ತಾರೆ. ಶ್ರೀಧರ್ ಮೂರ್ತಿ ಹಾಗೂ ವೆಂಕಟಲಕ್ಷ್ಮಮ್ಮರವರಿಗೆ ಮಕ್ಕಳು ಇಲ್ಲ ಎಂದರೆ ನಿಜ. ಶ್ರೀಧರ್ ಮೂರ್ತಿ ಹಾಗೂ ಗೋವರ್ಧನ್ ಶೆಟ್ಟಿರವರ ಸಂಬಂದ ಚೆನ್ನಾಗಿತ್ತು. ಶ್ರೀಧರ್ ಮೂರ್ತಿರವರಿಗೆ ಮಕ್ಕಳು ಇಲ್ಲದೇ ಇದ್ದಿದ್ದರಿಂದ ಗೋವರ್ಧನ್ ಶೆಟ್ಟಿರವರ ಮಕ್ಕಳೇ ಶ್ರೀಧರ್ ಮೂರ್ತಿರವರ ಆರೋಗ್ಯ ಹಾಗೂ ಅವರ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಶ್ರೀಧರ್ ಮೂರ್ತಿರವರು ಎಲ್ಲಾ ಮಕ್ಕಳ ಜೊತೆ ಸಮಾನವಾಗಿ ನೋಡುತ್ತಿದ್ದು ಆದರೆ ಗೋವರ್ಧನ್ ಶೆಟ್ಟಿರವರ ಮಕ್ಕಳ ಮೇಲೆ ವಿಶೇಷ ಒಡನಾಟ ಹೊಂದಿದ್ದರು ಎಂದು ಹೇಳುತ್ತಾರೆ. ಶ್ರೀಧರ್ ಮೂರ್ತಿರವರು ಕಟ್ಟಿದ ಛತ್ರಕ್ಕೆ ಉದ್ಘಾಟನೆಯ ಧಾರ್ಮಿಕ ಕಾರ್ಯಕ್ರಮವನ್ನು ಶ್ರೀಧರ್ ಮೂರ್ತಿರವರೇ ಮಾಡಿರುತ್ತಾರೆ.

10. ನನ್ನ ತಾಯಿ ಶಾರದಮ್ಮರವರ ಮದುವೆ ಯಾವಾಗ ಆಗಿರುತ್ತದೆ ಗೊತ್ತಿಲ್ಲ. ನನ್ನ ತಂದೆ ತಿಮ್ಮರಾಯಶೆಟ್ಟಿರವರು ಚಿಕ್ಕಮುನಿಸ್ವಾಮಪ್ಪರವರಿಗೆ ಅಳಿಯನಾಗಬೇಕು. ತಿಮ್ಮರಾಯಶೆಟ್ಟಿರವರು

ಚಿಕ್ಕಮುನಿಸ್ವಾಮಪ್ಪರವರಿಗೆ ಅಳಿಯ ಹೊರತುಪಡಿಸಿ ಬೇರೆ ರೀತಿಯಾಗಿ ಸಂಬಂಧಿಕರ ನನಗೆ ಗೊತ್ತಿಲ್ಲ, ಅದನ್ನು ಅವರಿಗೆ ಕೇಳಬೇಕು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಚಿಕ್ಕಮುನಿಸ್ವಾಮಪ್ಪರವರನ್ನು ಕೇಳಬೇಕು ಎಂದು ಹೇಳುತ್ತಾರೆ.

11. ಜನಾರ್ಧನ್ ಮೂರ್ತಿರವರು ಜೀವಂತವಿದ್ದಾರೆ. ಜನಾರ್ಧನ್ ಮೂರ್ತಿರವರಿಗೆ 3 ಜನ ಮಕ್ಕಳು. ನನಗೆ ಅಪ್ರಮೇಯಮೂರ್ತಿರವರ ಪರಿಚಯವಿದ್ದು ಅವರು ನನಗೆ ಸೋದರ ಮಾವ ಆಗಬೇಕು. ಅಪ್ರಮೇಯಮೂರ್ತಿರವರು ತೀರಿಕೊಂಡಿದ್ದು ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ಅಪ್ರಮೇಯಮೂರ್ತಿರವರಿಗೆ ಈಗ ನಾಲ್ಕು ಜನ ಮಕ್ಕಳು ಇರುತ್ತಾರೆ. ಲಕ್ಷ್ಮಿನಾರಾಯಣಮ್ಮರವರು ಶ್ರೀಧರ್ ಮೂರ್ತಿರವರ ಅಕ್ಕ ಆಗಬೇಕು ಮತ್ತು ನನಗೆ ದೊಡ್ಡಮ್ಮ ಆಗಬೇಕು. ಲಕ್ಷ್ಮೀನಾರಾಯಣಮ್ಮರವರು ತೀರಿಕೊಂಡಿದ್ದು ಯಾವಾಗ ತೀರಿಕೊಂಡಿರುತ್ತಾರೆ ಹೇಳಲು ಬರುವುದಿಲ್ಲ. ಲಕ್ಷ್ಮೀನಾರಾಯಣಮ್ಮರವರಿಗೆ ವಿಶ್ವನಾಥ್ ಎಂಬ ಮಗ ಇರುತ್ತಾರೆ. ಮುನಿತಾಯಮ್ಮರವರು ನನಗೆ ದೊಡ್ಡಮ್ಮ ಆಗಬೇಕು ಅವರು ಸಹ 3-4 ತಿಂಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿ ಶಾರದಮ್ಮರವರಿಗೆ ಐದು ಜನ ಗಂಡು ಮಕ್ಕಳು ಮತ್ತು ಐದು ಜನ ಹೆಣ್ಣು ಮಕ್ಕಳು. ಗೌರಮ್ಮರವರಿಗೆ ನಾಲ್ಕು ಜನ ಮಕ್ಕಳಿದ್ದು ಅದರಲ್ಲಿ 3 ಜನ ತೀರಿಕೊಂಡಿದ್ದು ಒಬ್ಬರೇ ಬದುಕಿರುತ್ತಾರೆ.

**ಈ ಸಮಯದಲ್ಲಿ ಸಾಕ್ಷಿ 4ನೇ ಪ್ರತಿವಾದಿ ತೀರಿಕೊಂಡಿರುತ್ತಾರೆ ಎಂದು ಸಾಕ್ಷಿ ಹೇಳಿದ್ದರಿಂದ 4ನೇ ಪ್ರತಿವಾದಿಯ ವಾರಸುದಾರರನ್ನು ಕಡತದ ಮೇಲೆ ಕರೆತರುವ ಅವಶ್ಯಕತೆ ಇದ್ದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**